**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 8/2014**

**ದೋ.ಸಾ. :71 ಫ್ರಾ.ಸಾ. : 37**

ಸಾಕ್ಷಿಯ ಹೆಸರು : ಪ್ರಕಾಶ ಗಣಪಯ್ಯ ಕುಡಾಲ್ಕರ್
ತಂದೆಯ ಹೆಸರು : ಗಣಪಯ್ಯ ಕುಡಾಲ್ಕರ್
ವಯಸ್ಸು : 55 ವರ್ಷ
ಉದ್ಯೋಗ : ಬಂಗಾರದ ಕೆಲಸ.
ವಾಸ : ಅಂಕೋಲಾ.

**ದಿನಾಂಕಃ 19-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಅಂಕೋಲಾದಲ್ಲಿ 30 ವರ್ಷಗಳಿಂದ ಬಂಗಾರದ ಕೆಲಸ ಮಾಡುತ್ತಿದ್ದೇನೆ. ಆರೋಪಿ ನನ್ನ ಊರಿನವನು ಆಗಿದ್ದರಿಂದ ನನಗೆ ಪರಿಚಯ ಇದ್ದಾನೆ. ಆರೋಪಿ ಮನೆಗೆ ಲೋಕಾಯುಕ್ತ ಪೊಲೀಸ ನವರು ನನ್ನನ್ನು ಪಂಚನಾಮೆಯ ಸಮಯದಲ್ಲಿ ದಿನಾಂಕ 04.05.2010 ರಲ್ಲಿ ಕರೆಯಿಸಿದ್ದರು. ನಾವು ಆರೋಪಿಯ ಮನೆಗೆ ಹೋದಾಗ ಅಲ್ಲಿ ಆರೋಪಿ ಮನೆಯವರು ಇದ್ದರು ಮತ್ತು ಲೋಕಾಯುಕ್ತ ಪೊಲೀಸ ಅಧಿಕಾರಿಗಳು ಇದ್ದರು. ಅಲ್ಲಿ ಲೋಕಾಯುಕ್ತ ಪೊಲೀಸನವರು ಆರೋಪಿಯ ಮನೆಯಲ್ಲಿ ಶೋಧನೆ ಮಾಡುತ್ತಿದ್ದರು. ನಾನು ಹೋದಾಗ ನನಗೆ ಅಲ್ಲಿ ಬಂಗಾರದ ಆಭರಣಗಳ ಮೌಲ್ಯಮಾಪನ ಮಾಡಲು ಲೋಕಾಯುಕ್ತ ಅಧಿಕಾರಿ ಹೇಳಿದರು. ನಾನು ಆ ಪ್ರಕಾರ ಆರೋಪಿಯ ಮನೆಯಲ್ಲಿ ಬಂಗಾರದ ಆಭರಣಗಳ ಮೌಲ್ಯ ಮಾಪನ ಮಾಡಿ ಹೇಳಿದೆ. ನಾನು ಮೌಲ್ಯ ಮಾಪನ ಮಾಡಿ ಹೇಳಿದ್ದನ್ನು ಲೋಕಾಯುಕ್ತ ಪೊಲೀಸ ನವರು ಬರೆದುಕೊಂಡರು. ನಾನು ಖರೀದಿ ವರ್ಷದ ಮೌಲ್ಯದ ಆಧಾರದ ಮೇಲೆ ಸದರಿ ಬಂಗಾರದ ಆಭರಣಗಳ ಅಂದಾಜು ಬೆಲೆಯನ್ನು ನಿರ್ಧರಿಸಿದೆ. ಆಗ ಲೋಕಾಯುಕ್ತ ಪೊಲೀಸ ನವರು ಆ ಬಗ್ಗೆ ಬೆರಳಚ್ಚು ಮಾಡಿಕೊಂಡಾಗ ನಾನು ಅಲ್ಲಿಯೇ ಇದ್ದೆ. ಆಗ ಅವರು ಮಾಡಿದ ಪಂಚನಾಮೆಗೆ ಸಹಿ ಮಾಡಿದ್ದೆ. ಈಗ ಆ ಪಂಚನಾಮೆ ನೋಡಿರುತ್ತೇನೆ ಅದರಲ್ಲಿ ನನ್ನ ರುಜು ಇದೆ. ಸದರಿ ಪಂಚನಾಮೆಯನ್ನು

ಈಗಾಗಲೇ ನಿಪಿ–85 ಎಂದು ಗುರುತಿಸಲಾಗಿದೆ. ಅದರಲ್ಲಿ ಸಾಕ್ಷಿಯ ರುಜುವನ್ನು ನಿಪಿ–85(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ ಎನ್ ಎನ್ ರವರಿಂದಃ**

2. ಚಿನ್ನಾಭರಣದ ಮೌಲ್ಯ ಅದರ ಗುಣಮಟ್ಟ ಮತ್ತು ತೂಕದ ಮೇಲೆ ಅವಲಂಬಿತವಾಗಿರುತ್ತದೆ ಎಂದರೆ ಹೌದು. ಚಿನ್ನದ ಗುಣಮಟ್ಟವನ್ನು ಅದರ ಕ್ಯಾರೆಟ್ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ ಎಂದರೆ ಹೌದು. ನಾನು ಓರೆಕಲ್ಲಿನಿಂದ ಆಗ ಚಿನ್ನದ ಆಭರಣಗಳ ಪರೀಕ್ಷೆ ಮಾಡಿ ಅವುಗಳ ಮೌಲ್ಯ ನಿರ್ಧರಣೆ ಮಾಡಿರುತ್ತೇನೆ. ನಾನು ಓರೆಕಲ್ಲಿನಿಂದ ಪರೀಕ್ಷೆ ಮಾಡಿದ್ದ ಬಗ್ಗೆ ಪಂಚನಾಮೆಯಲ್ಲಿ ಬರೆಯಲಿಲ್ಲ. ನಾನು ಆರೋಪಿಯ ಮನೆಯಲ್ಲಿ ಚಿನ್ನಾಭರಣದ ಗುಣಮಟ್ಟದ ಪರೀಕ್ಷೆ ಮಾಡಿಲ್ಲ ಎಂದರೆ ಸರಿಯಲ್ಲ. ಮದುವೆಯ ಸಮಯದಲ್ಲಿ ವಧುವಿಗೆ ಆಕೆಯ ತಂದೆತಾಯಿ ಸಾಮಾನ್ಯವಾಗಿ ಚಿನ್ನಾಭರಣ ಕೊಡುತ್ತಾರೆ ಎಂದರೆ ಹೌದು. ಅದೇ ರೀತಿ ಹಳೆ ಚಿನ್ನದ ಆಭರಣಗಳನ್ನು ಬದಲಾಯಿಸಿ ಹೊಸ ಚಿನ್ನದ ಆಭರಣಗಳನ್ನು ಮಾಡಿಸಿಕೊಳ್ಳುತ್ತಾರೆ ಎಂದರೆ ಹೌದು. ಆ ದಿನ ನಾನು ಪಂಚನಾಮೆ ಮಾಡಿದ ಸ್ಥಳಕ್ಕೆ ಪಂಚನಾಮೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಲೋಕಾಯುಕ್ತ ಪೊಲೀಸ ನವರ ಮಾತು ಕೇಳಿ ನಾನು ಅವರು ತಯಾರಿಸಿದ ಕಾಗದ ಪತ್ರಕ್ಕೆ ಸಹಿ ಮಾಡಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.